# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು -570006.

## ಅಧಿಸೂಚನೆ

ವಿಷಯ: ಹೊಸ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪನೆ ಮಾಡುವ ಬಗೆಗೆ.

ಉಲ್ಲೇಖ : 1.ದಿನಾಂಕ: 18-06-2024ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 178ನೇ ಸಭೆಯ ತೀರ್ಮಾನ.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 22-07-2024

*******

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ರಾಜ್ಯದಲ್ಲಿ ದೂರಶಿಕ್ಷಣ ನೀಡುವ ಏಕೈಕ ವಿಶ್ವವಿದ್ಯಾನಿಲಯವಾಗಿದ್ದು, 'ಮುಕ್ತ ಮತ್ತು ದೂರ ಶಿಕ್ಷಣ ಪದ್ಧತಿ' ಯಲ್ಲಿ ಶಿಕ್ಷಣವನ್ನು ನೀಡುತ್ತ ಬಂದಿದೆ. 'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎಂಬ ಧ್ಯೇಯವಾಕ್ಯಕ್ಕೆ ಅನುಗುಣವಾಗಿ 'ಪ್ರಾದೇಶಿಕ ಕೇಂದ್ರ' ಗಳ ಮೂಲಕ ದೂರ ಶಿಕ್ಷಣ ವ್ಯವಸ್ಥೆಯನ್ನು ವಿದ್ಯಾರ್ಥಿಗಳಿರುವಲ್ಲಿಯೇ ಕೊಂಡೊಯ್ಯಲು ಅನುಕೂಲವಾಗುವಂತೆ ರಾಜ್ಯದ ವಿವಿಧ ನಗರಗಳಲ್ಲಿ ಈಗಾಗಲೇ 35 ಪ್ರಾದೇಶಿಕ ಕೇಂದ್ರಗಳನ್ನು ತೆರೆದು ಕಾರ್ಯ ನಿರ್ವಹಿಸಲಾಗುತ್ತಿದೆ. ಉತ್ತರ ಕರ್ನಾಟಕದ ಗೋರಟಾ(ಬಿ)ಗ್ರಾಮ ಹಲಸೂರು ತಾಲ್ಲೂಕು ಬೀದರ್ ಜಿಲ್ಲೆಯಲ್ಲಿ ಶಿಕ್ಷಣ ಸೌಲಭ್ಯವಂಚಿತ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಸೌಲಭ್ಯವನ್ನು ಅವರಿರುವಲ್ಲಿಯೇ ನೀಡುವ ದೃಷ್ಟಿಯಿಂದ ಹಾಗೂ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಸುತ್ತಮುತ್ತಲಿನ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ, ಈ ಎರಡು ಜಾಗಗಳಲ್ಲಿ ಪ್ರಾದೇಶಿಕ ಕೇಂದ್ರ ಕಛೇರಿಗಳನ್ನು ಸ್ಥಾಪಿಸಲು ದಿನಾಂಕ: 18-06-2024 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 178ನೇ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆಯ ಗೋರಟಾ(ಬಿ) ಗ್ರಾಮದಲ್ಲಿ ಮತ್ತು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದಲ್ಲಿ ಹೊಸದಾಗಿ 2 ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲು 178ನೇ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನ ಹಾಗೂ ಉಲ್ಲೇಖ(2) ರಲ್ಲಿ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ತೀರ್ಮಾನವನ್ನು ಅನುಷ್ಠಾನಗೊಳಿಸುವ ಸಂಬಂಧದಲ್ಲಿ ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ.

**ಸಂಖ್ಯೆ: ಕರಾಮುವಿ/ಡೀನ್(ಅ.ಕೇ)-07/254/2024-25 ದಿನಾಂಕ; 23-07-2024**

ಮೇಲಿನ ಪ್ರಸ್ತಾವನೆಗೊಳಪಟ್ಟು ಹಾಗೂ ವ್ಯವಸ್ಥಾಪನಾ ಮಂಡಳಿಯ ತೀರ್ಮಾನದಂತೆ ಮತ್ತು ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾಯ್ದೆಯ ಅಧ್ಯಾಯ-11 ರ ಕಂಡಿಕೆ 5(9) ರಲ್ಲಿನ ಅಧಿಕಾರದಡಿಯಲ್ಲಿ ತಕ್ಷಣದಿಂದ ಜಾರಿಗೆ ಬಂದಂತೆ

| | |
|---|---|
| 01 | ಬೀದರ್ ಜಿಲ್ಲೆ ಹಲಸೂರು ತಾಲ್ಲೂಕು ಗೋರಟಾ(ಬಿ) ಗ್ರಾಮ |
| 02 | ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ |

ಈ ಸ್ಥಳಗಳಲ್ಲಿ ಹೊಸದಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲು ಅಧಿಸೂಚನೆ ಹೊರಡಿಸಲಾಗಿದೆ. ಪ್ರಾದೇಶಿಕ ಕೇಂದ್ರಗಳಿಗೆ ಸ್ಥಳವನ್ನು ಗುರುತಿಸಲು ಅಗತ್ಯಕ್ರಮ ವಹಿಸುವಂತೆ ಆದೇಶಿಸಲಾಗಿದೆ.

ಆದೇಶದ ಮೇರೆಗೆ

23/07/2024

ಕುಲಸಚಿವ

ಪ್ರತಿಗಳು:

1. ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
2. ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿವಿ ನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕರಾಮುವಿ, ಮೈಸೂರು.
4. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
5. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು, ಕರಾಮುವಿ, ಮೈಸೂರು.
7. ಗ್ರಂಥಪಾಲಕರು/ಸಹಾಯಕ ಗ್ರಂಥಪಾಲಕರು, ಗ್ರಂಥಾಲಯ ವಿಭಾಗ, ಕರಾಮುವಿ.
8. ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿಯ ಎಲ್ಲಾ ಪ್ರಾದೇಶಿಕ ಕೇಂದ್ರಗಳು.
9. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳು, ಕರಾಮುವಿ, ಮೈಸೂರು.
10. ಎಲ್ಲಾ ಅಧೀಕ್ಷಕರುಗಳು, ಕರಾಮುವಿ, ಮೈಸೂರು.
11. ಗೌರವ ನಿರ್ದೇಶಕರು, ಪ್ರಸಾರಾಂಗ, ಕರಾಮುವಿ, ಮೈಸೂರು.
12. ಸಮಾಲೋಚಕರು, ಐಟಿ ವಿಭಾಗ, ಕರಾಮುವಿ, ಮೈಸೂರು.
13. ನಿಲಯ ನಿರ್ದೇಶಕರು, ಎಫ್.ಎಂ ಜ್ಞಾನವಾಣಿ, ಕರಾಮುವಿ, ಮೈಸೂರು.
14. ನಿರ್ದೇಶಕರು, CIQA, NAAC,PMEB, ಕರಾಮುವಿ, ಮೈಸೂರು.
15. ಡಾ.ನವೀನ್ ಕುಮಾರ್.ಸಿ.ಜಿ, ನೋಡಲ್ ಅಧಿಕಾರಿ, ವಿವಿ ವೆಬ್‌ಸೈಟ್, ಕರಾಮುವಿ, ಮೈಸೂರು.
16. ವಿದ್ಯಾರ್ಥಿ ಕಲ್ಯಾಣ ಕೇಂದ್ರ, ಕರಾಮುವಿ,ಮೈಸೂರು
17. ಕಛೇರಿ ಪ್ರತಿ.